FEBRUARY 10, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

‘ಜಂತುಹುಳು ಮುಕ್ತ ಮಕ್ಕಳು, ಉಜ್ವಲ ಭವಿ ್ಯಗಳು’ ಧ್ಯೇಯದೊಂದಿಗೆ, ಇಂದು, ಹಾವೇರಿ ಜಿಲ್ಲೆಯಾದ್ಯಂತ ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನ ಆಯೋಜಿಸಲಾಗಿದೆ. ಜಂತುಹುಳು ನಿವಾರಣಾ ಮಾತ್ರೆಗಳನ್ನು ತೆಗೆದುಕೊಳ್ಳದಿರುವ ಅರ್ಹರಿಗೆ, 16ನೇ ತಾರೀಖು, ‘ಮಾಪ್–ಅಪ್ ದಿನ’ ದಂದು, ಗುಳಿಗೆ ವಿತರಿಸಲಾಗುವುದು ಎಂದು, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯಾಧಿಕಾರಿ, ಡಾಕ್ಟರ್ ಜಯಾನಂದ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಎಂ. ಜಯಾನಂದ ಧ್ವನಿ 40 ಸೆಕೆಂದುಗಳು

<><><>

ಕಲಬುರಗಿ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ, ಜೇವನ್ ಪ್ರಕಾಶ ಶಾಲೆಯಲ್ಲಿ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆಗೆ, ಚಾಲನೆ ನೀಡಿ, ಶಾಲೆಯ ಮಕ್ಕಳಿಗೆ, ಅಲ್ಬೆಂಡಜೋಲ್ ಮಾತ್ರೆ ನೀಡಿ, ನುಂಗಿಸಿದರು.

<><><>

ಉತ್ತರಕನ್ನಡ ಲೋಕಸಭಾ ಕ್ಷೇತ್ರದ ಸಂಸದ, ವಿಶ್ವೇಶ್ವರ ಹೆಗಡೆ ಕಾಗೇರಿ ನೇತೃತ್ವದ, ಉತ್ತರಕನ್ನಡ ಜಿಲ್ಲೆಯ, ಸರ್ವಪಕ್ಷ ನಿಯೋಗ, ಬೇಡ್ತಿ–ಹಿರೇವಡ್ಡತ್ತಿ ಮತ್ತು ಅಘನಾಶಿನಿ–ವೇದಾವತಿ ನದಿ ಜೋಡಣೆ ಪ್ರಸ್ತಾವದ ಬಗ್ಗೆ, ಹೊಸ ದಿಲ್ಲಿಯಲ್ಲಿ, ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆ ಸಚಿವ, ಭೂಪೇಂದ್ರ ಯಾದವ, ಅವರನ್ನು ಭೇಟಿ ಮಾಡಿ ಚರ್ಚಿಸಿತು. ಪರಿಸರ ಅಸ್ನೇಹಿ ಯೋಜನೆಗಳಿಂದ, ಪರಿಸರ ಸೂಕ್ಷ್ಮ ಪಶ್ಚಿಮಘಟ್ಟ ಪ್ರದೇಶದಲ್ಲಿ, ಭಾರ ಧಾರಣಾ ಶಕ್ತಿ ಮೀರಿ, ಸ್ಥಳೀಯ ಪಾರಿಸಾರಿಕ ಕೊಂಡಿಗಳನ್ನು ತುಂಡರಿಸಲಿದೆ ಎಂದು, ನಿಯೋಗ, ಕೇಂದ್ರ ಸಚಿವರ ಗಮನ ಸೆಳೆಯಿತು.

<><><>

ಸಾರ್ವಜನಿಕರಲ್ಲಿ ಆರ್ಥಿಕ ಶಿಸ್ತು ಮತ್ತು ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ, ಜಾಗೃತಿ ಮೂಡಿಸಲು, ಚಿತ್ರದುರ್ಗ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ, ಆರ್ಥಿಕ ಸಾಕ್ಷರತಾ ಸಪ್ತಾಹ ಆಯೋಜಿಸಲಾಗಿದೆ. ಜಿಲ್ಲಾ ಪಂಚಾಯಿತಿ ಸಿ.ಇ.ಓ. ಎಸ್.ಆಕಾಶ, ಚಾಲನೆ ನೀಡಿ, ಈ ತಿಂಗಳ 13ರ ವರೆಗೆ, ಜಿಲ್ಲೆಯಾದ್ಯಂತ 258 ಬ್ಯಾಂಕ್ ಶಾಖೆಗಳಲ್ಲಿ, ಆರ್ಥಿಕ ಸಾಕ್ಷರತಾ ಕಾರ್ಯಕ್ರಮಗಳು, ನಡೆಯಲಿವೆ ಎಂದರು.

<><><>

"ಕೇಂದ್ರ ಬಜೆಟ್–2026" – ವಿಚಾರ ಸಂಕಿರಣ, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದ, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗದಲ್ಲಿ, ಇಂದು ಆಯೋಜಿತವಾಗಿದೆ. ಕೆನರಾ ಬ್ಯಾಂಕ್ ಪೀಠ ಮತ್ತು ಅರ್ಥಶಾಸ್ತ್ರ ಸಂಶೋಧನಾ ವೇದಿಕೆಯ ಸಹಯೋಗದಲ್ಲಿ ಜರುಗುತ್ತಿರುವ ವಿಚಾರ ಸಂಕಿರಣದಲ್ಲಿ, ಕ್ಷೇತ್ರ ತಜ್ಞರು ಪಾಲ್ಗೊಂಡು, ಕೇಂದ್ರ ಬಜೆಟ್ ವಿಶ್ಲೇಷಿಸುತ್ತಿದ್ದಾರೆ.

<><><>

ಬಳ್ಳಾರಿ ಜಿಲ್ಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಜಿಲ್ಲಾಡಳಿತ ವಿದ್ಯಾ ಸಂಸ್ಥೆಗಳಲ್ಲಿಯೇ, ವಿದ್ಯಾರ್ಥಿಗಳಿಗೆ ಜಾತಿ ಪ್ರಮಾಣ ಪತ್ರ ಮತ್ತು 371 (ಜೆ) ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವ, ವಿನೂತನ ಯೋಜನೆ ಜಾರಿಗೊಳ್ಳಲಿದೆ ಎಂದು, ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ, ತಿಳಿಸಿದ್ದಾರೆ. ಬಳ್ಳಾರಿ ಜಿಲ್ಲೆಯ, ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 10ನೇ ತರಗತಿ, ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ, ಸೂಕ್ತ ದಾಖಲೆಗಳನ್ನು ಪಡೆದು, ಪ್ರಮಾಣ ಪತ್ರಗಳನ್ನು ವಿತರಿಸಲು ತೀರ್ಮಾನಿಸಲಾಗಿದೆ ಎಂದಿದ್ದಾರೆ.

<><><>

ನವಜಾತ ಶಿಶುಗಳಲ್ಲಿ, ಮಧುಮೇಹದ ಸಮಸ್ಯೆ ಹಾಗೂ ಪೀಡಿತ ಮಕ್ಕಳಿಗೆ ಅತ್ಯುತ್ತಮ ವೈದ್ಯಕೀಯ ಚಿಕಿತ್ಸೆ ಒದಗಿಸುವ ಕುರಿತು, ಬೆಂಗಳೂರಿನ ವಿಕಾಸಸೌಧದಲ್ಲಿ, ಆಸ್ಟ್ರೇಲಿಯಾದ 'ಲೈಫ್ ಫಾರ್ ಎ ಚೈಲ್ಡ್' ಸಂಸ್ಥೆಯ, ಪ್ರೊಫೆಸರ್ ಗ್ರಹಾಂ ಓಗಲ್ ಅವರೊಂದಿಗೆ, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ಮಹತ್ವದ ಸಮಾಲೋಚನೆ ನಡೆಸಿದರು. ಮಧುಮೇಹ (Type 1 Diabetes Mellitus) ಮುಕ್ತ, ಆರೋಗ್ಯವಂತ ಮಕ್ಕಳು ಹಾಗೂ ಮಧುಮೇಹಿ ಮಕ್ಕಳ ಉಜ್ವಲ ಭವಿ ್ಯಕ್ಕಾಗಿ, ವೈದ್ಯರು, ದಾದಿಯರು, ಪೋಷಕರಿಗೆ ವಿಶೇಷ ತರಬೇತಿ ಆಯೋಜಿಸಲು, ನಿರ್ಧರಿಸಿದ್ದಾಗಿ ಸಚಿವರು ತಿಳಿಸಿದ್ದಾರೆ.

<><><>

ಭಾರತ್ ಹೆವಿ ಇಲೆಕ್ಟ್ರಿಕಲ್ಸ್ ಲಿಮಿಟೆಡ್ ಸಹಯೋಗದಲ್ಲಿ, ಪರಿಸರ ಸ್ನೇಹಿ ಕೆ.ಸಿ. ವ್ಯಾಲಿ ಯೋಜನೆಯನ್ನು, ಸಣ್ಣ ನೀರಾವರಿ ಇಲಾಖೆ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದು, ವ ್ಷ ಪೂರ್ತಿ ಭರ್ತಿಯಾಗಿರುವ, ರಾಜ್ಯದ ವಿವಿಧ ಕೆರೆಗಳಲ್ಲಿ, ಸೌರ ಫಲಕಗಳನ್ನು ಅಳವಡಿಸಲು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಯೋಜಿಸಿದೆ ಎಂದು, ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ವಿಕಾಸಸೌಧದ ಸಚಿವರ ಕಚೇರಿಯಲ್ಲಿ, ಇಲಾಖೆಯ ಅಧಿಕಾರಿಗಳೊಂದಿಗೆ, ಮಹತ್ವದ ಸಭೆ ನಡೆಯಿತು.

<><><>

ಧಾರವಾಡದ ಡೆಪ್ಯುಟಿ ಚನ್ನಬಸಪ್ಪ ಪ್ರತಿಷ್ಠಾನ, ಎಚ್.ಎಫ್. ಕಟ್ಟಿಮನಿ ಪ್ರತಿಷ್ಠಾನ ಹಾಗೂ ರಂಗಾಯಣದ ಸಹಭಾಗಿತ್ವದಲ್ಲಿ, 31ನೇ ಪಠ್ಯಾಧಾರಿತ 10 ನಾಟಕಗಳ ಪ್ರದರ್ಶನ, ನಾಟಕೋತ್ಸವ, ಇಂದು ರಂಗಾಯಣದ, ರಂಗ ಸಮುಚ್ಛಯ ಭವನದಲ್ಲಿ ಆಯೋಜಿತವಾಗಿದೆ. ನಾಟಕೋತ್ಸವದ ಸಂಯೋಜಕರಾದ, ಕೆ.ಎಚ್. ನಾಯಕ, ತಮ್ಮ ಸುಪುತ್ರಿ ದಿವಂಗತ ರಶ್ಮಿ ಅವರ ನೆನಪಿನಲ್ಲಿ ಸ್ಥಾಪಿಸಿದ, ದತ್ತಿ ಪ್ರಶಸ್ತಿ 'ರಂಗ ರಶ್ಮಿ'ಯನ್ನು, ಹುಬ್ಬಳ್ಳಿಯ ಹಿರಿಯ ರಂಗ ಕಲಾವಿದೆ, ವೀಣಾ ಅಠವಲೆ ಮೋಡಕ ಅವರಿಗೆ, ಆಕಾಶವಾಣಿ ಧಾರವಾಡ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥ, ಶರಣಬಸವ ಚೋಳಿನ, ಪ್ರದಾನಿಸಿ ಗೌರವಿಸಲಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯ, ಆಡಳಿತ ವಿಭಾಗದ ಉಪ ನಿರ್ದೇಶಕ, ಗಿರೀಶ ಪದಕಿ, ಅಧ್ಯಕ್ಷತೆ ವಹಿಸಲಿದ್ದಾರೆ.

<><><>

75 ವರ್ಷ ಮೇಲ್ಪಟ್ಟ, ನೋಂದಾಯಿತ ಹಿರಿಯ ನಾಗರಿಕರು, 'ಅನ್ನ ಸುವಿಧಾ ಯೋಜನೆ' ಅಡಿ, ತಮ್ಮ ಮನೆ ಬಾಗಿಲಿಗೆ, ನ್ಯಾಯಬೆಲೆ ಅಂಗಡಿಯಿಂದ, ಪಡಿತರ ಧಾನ್ಯಗಳನ್ನು ಪಡೆಯುವ ಯೋಜನೆಗೆ, ಕಲಬುರಗಿ ಜಿಲ್ಲೆಯಲ್ಲಿ ಚಾಲನೆ ನೀಡಲಾಗಿದೆ. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕರು, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ, 'ಅನ್ನ ಸುವಿಧಾ

ಯೋಜನೆ' ಅಡಿ, ಜಿಲ್ಲೆಯ ಅರ್ಹ ಪಡಿತರ ಚೀಟಿದಾರರು, ತಮ್ಮ ಹೆಸರು ನೋಂದಾಯಿಸಿ, ಪ್ರಯೋಜನ ಪಡೆಯುವಂತೆ, ಕೋರಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.